**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ</u>**

**<u>ಸಿ.ಸಿ. ನಂ. 4/24</u>**

**ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-6**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ.ಪಾರ್ಥ ಸಾರಧಿ |
| ತಂದೆಯ/ ಗಂಡನ ಹೆಸರು | : | ದೇವಯ್ಯ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ |
| ವಾಸ ಸ್ಥಳ | : | ಮೈಸೂರು |

**<u>ದಿನಾಂಕ 07.11.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2014 ರಿಂದ ಇಲ್ಲಿಯವರೆಗೂ ಸರಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ30.06.2022 ರಂದು ಮಧ್ಯಾಹ್ನ 1.10 ಗಂಟೆ ಸಮಯದಲ್ಲಿ ಚಾಸಾ 1 ರವರು ಅವರ ಅಣ್ಣನ ಮಗ ಪ್ರಕಾಶ್ ಎಂಬುವವರ ಜೊತೆ ಗೋವಿಂದನಾಯಕ ಮತ್ತು ವೆಂಕಟೇಶ್ ನಾಯಕ ಎಂಬುವವರು ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ ಎಂಬ ಹಲ್ಲೆಯ ಚರಿತ್ರೆಯೊಂದಿಗೆ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿ ಚಾಸಾ 1 ರವರನ್ನು ಪರೀಕ್ಷಿಸಲಾಗಿ ಅವರ ಬಲ ಗೈನ ತೋರುಬೆರಳಲ್ಲಿ 3X 0.2 cm ಹರಿದ ಗಾಯ, ಎದೆಯ ಮೇಲ್ಭಾಗದಲ್ಲಿ ನೋವಿನ ಅನುಭವ, ಬೆನ್ನಿನ ಮೇಲ್ಭಾಗದಲ್ಲಿ ನೋವಿನ ಅನುಭವ.

ಚಾಸಾ 2 ರವರಿಗೆ ತಲೆಯ ಮೇಲ್ಭಾಗದ ಬಲಗಡೆ ನೋವಿನ ಅನುಭವ, ಬೆನ್ನಿನ ಮಧ್ಯಭಾಗದಲ್ಲಿ ನೋವಿನ ಅನುಭವ. ಚಾಸಾ 1 ಮತ್ತು 2 ರವರಿಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ  ಗಾಯ ಆಗಿರುತ್ತದೆ. ಸದರಿ ಗಾಯದ ಪ್ರಮಾಣಪತ್ರವನ್ನು ನಿಪಿ 3 ಮತ್ತು 4 ಮತ್ತು ಸಾಕ್ಷಿ ಸಹಿಯನ್ನು ನಿಪಿ 3 (ಎ) ಮತ್ತು 4 (ಎ) ಎಂದು ಗುರುತಿಸಲಾಯಿತು. ಚಾಸಾ 1 ರವರಿಗೆ ಆದ 1 ನೇ ಗಾಯ ಮಚ್ಚಿನಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ 2 ರವರಿಗೆ ಮತ್ತು ಚಾಸಾ 1 ರವರಿಗೆ ಆಗಿರುವ ಉಳಿದ ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ</u>**

ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ಊಟದ ಸಮಯ ಮಧ್ಯಾಹ್ನ 1 ರಿಂದ 1.45. ಸದರಿ ದಿನ 5 ಜನರು ಬಂದಿದ್ದರು. ಅವರೆಲ್ಲರನ್ನು ಪರೀಕ್ಷೆ ಮಾಡಿರುತ್ತೇನೆ. ನಿಪಿ 3 ಮತ್ತು 4 ರಲ್ಲಿ ಪ್ರಕಾಶ್ ಎಂಬುವವರ ಹೆಸರನ್ನು ಹೊರತುಪಡಿಸಿ ಬೇರೆಯವರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ಚಾಸಾ 1 ಮತ್ತು 2 ರವರನ್ನು ಪರೀಕ್ಷಿಸುವ ಮೊದಲು ಪೊಲೀಸರಿಗೆ ತಿಳಿಸಿರುವುದಿಲ್ಲ. ತಿಳಿಸಲು ತೊಂದರೆ ಇರಲಿಲ್ಲ. ಚಾಸಾ 1 ರವರಿಗೆ ಆಗಿರುವ ಗಾಯ ಸಾಮಾನ್ಯವಾಗಿ ಬೇಲಿ ಮುಳ್ಳಿನಿಂದ ತೆರಚಿದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 2 ರವರಿಗೆ ಆಗಿರುವ ಗಾಯ ಸಾಮಾನ್ಯವಾಗಿ ಜಾಸ್ತಿ ವ್ಯವಸಾಯ ಮಾಡಿದಾಗ ಹೆಚ್ಚು ಆಯಾಸ ಆದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಗಟ್ಟಿ ನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 1 ಮತ್ತು 2 ರವರಿಗೆ ಯಾವುದೇ ಗಾಯ ಆಗಿಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**